# ನಡಾವಳಿ ಮತ್ತು ನೈತಿಕತೆ ನೀತಿ
# ಜಾಗರೂಕ ಮಾತುಕತೆ ನೀತಿ

ETHICS & LEGAL COMPLIANCE | ISSUED: May 1 2014 – REVISED: December 13, 2021

ಅಧಿಕಾರಿ, ನಿರ್ದೇಶಕ, ಸಲಹೆಗಾರ ಮತ್ತು ಏಜೆಂಟರು ಸೇರಿದಂತೆ ಮ್ಯಾಗ್ನ ಪರವಾಗಿ ಕಾರ್ಯನಿರ್ವಹಿಸುವ ಉದ್ಯೋಗಿ ಮತ್ತು ಇತರ ವ್ಯಕ್ತಿಗಳಿಗೆ ಎಲ್ಲಾ ಮಾತುಕತೆಗಳಲ್ಲಿ ಎಚ್ಚರಿಕೆ ಮತ್ತು ವೃತ್ತಿಪರತೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಸಲು ಈ ನೀತಿಯನ್ನು ಉದ್ದೇಶಿಸಲಾಗಿದೆ. ಹಾಗೆ ಮಾಡುವುದರಿಂದ ಸರಿಯಿಲ್ಲದ ಮಾತುಕತೆಗಳಿಂದ ಆಗಬಹುದಾದ ಕೆಟ್ಟ ಪರಿಣಾಮಗಳಿಂದ ನಿಮ್ಮನ್ನು ಮತ್ತು ಮ್ಯಾಗ್ನವನ್ನು ಕಾಪಾಡಲು ಇದು ಸಹಾಯ ಮಾಡುತ್ತದೆ.

ಈ ನೀತಿ Magna International Inc. ಮತ್ತು ಅದರ ಎಲ್ಲಾ ಕಾರ್ಯಾಚರಣಾ ಗುಂಪು, ವಿಭಾಗ, ಜಂಟಿ ಉದ್ದಿಮೆಗಳಿಗೆ ಮತ್ತು ಜಾಗತಿಕವಾದ ಇತರ ಕಾರ್ಯಾಚರಣೆಗಳಿಗೆ (ಒಟ್ಟಾರೆಯಾಗಿ "Magna"ಗೆ) ಅನ್ವಯಿಸುತ್ತದೆ.

## ಪರಿಚಯ

ಮ್ಯಾಗ್ನದಲ್ಲಿ, ನಾವು ನಮ್ಮ ಉದ್ಯೋಗಿಗಳಿಗೆ ಎಲ್ಲಾ ಮಾತುಕತೆಗಳಲ್ಲಿ ವೃತ್ತಿಪರತೆ ಮತ್ತು ಸ್ಪಷ್ಟತೆ ಕಾಪಾಡಿಕೊಳ್ಳಲು ಹಾಗೂ ಎಚ್ಚರಿಕೆ ವಹಿಸಿ ಮಾತುಕತೆಗೆ ಉತ್ತಮ ದಾರಿಯನ್ನು ಪರಿಗಣಿಸಲು ಪ್ರೋತ್ಸಾಹಿಸುತ್ತೇವೆ. ಸಂಕೀರ್ಣತೆ, ತುರ್ತು ಮತ್ತು ಸೂಕ್ಷ್ಮತೆ ಆಧಾರದಲ್ಲಿ, ಬೇರೆ-ಬೇರೆ ವಿಷಯಗಳ ಬಗ್ಗೆ ಮಾತುಕತೆ ನಡೆಸಲು ಬೇರೆ-ಬೇರೆ ದಾರಿಗಳನ್ನು, ಉದಾಹರಣೆಗೆ, ವ್ಯಕ್ತಿಗತ ಭೇಟಿಗಳಲ್ಲಿ, ಹಾಗೆ ವಿವಿಧ ವೇದಿಕೆಗಳಾದ ದೂರವಾಣಿ, ಎಲೆಕ್ಟ್ರಾನಿಕ್ ಅಥವಾ ವರ್ಚುವಲ್ ವ್ಯವಸ್ಥೆಯನ್ನು ಅನುಸರಿಸಬೇಕಾಗುತ್ತದೆ. ಪ್ರತಿ ರೀತಿಯ ಮಾತುಕತೆ ದಾರಿಯು ಕೆಲವು ಉದ್ದೇಶಗಳಿಗೆ ಸೂಕ್ತವಾಗಿರಬಹುದು. ನೀವು ಪರಿಸ್ಥಿತಿಗೆ ಯಾವ ಪ್ರಕಾರದ ಮಾತುಕತೆ ಉತ್ತಮವಾಗಿರುತ್ತದೆ ಎಂಬುದನ್ನು ನಿರ್ಧರಿಸಲು ಸಮಯ ತೆಗೆದುಕೊಳ್ಳಬೇಕು.

ನೀವು ಬರವಣಿಗೆಯ ಮುಖೇನ ಮಾತುಕತೆ ಮಾಡುವಾಗ, ಮಾತುಕತೆ ವಿಷಯಕ್ಕೆ ಮತ್ತು ಕೇಳುಗರಿಗೆ ಸೂಕ್ತವಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು. ಯಾವುದೇ ಸ್ವರೂಪದಲ್ಲಿ ಬರಹದ ಮುಖೇನ ಮಾತುಕತೆ ಮಾಡುವಾಗ, ವಿಷಯದ ಆಳ ಮತ್ತು ವಿಷಯವನ್ನು ಹೇಗೆ ವ್ಯವಸ್ಥಿತವಾಗಿ ಮಂಡಿಸಬಹುದು ಎಂಬುದರ ಬಗ್ಗೆ ಯೋಚಿಸಿ (ಪ್ರತಿಷ್ಠೆಯ ದೃಷ್ಟಿಯಿಂದ, ಕಾನೂನು ಪ್ರಕ್ರಿಯೆಗಳಲ್ಲಿ, ಅಥವಾ ಬೇರೆ ರೀತಿಯ ಮಾತುಕತೆಗಳಲ್ಲಿ). ಕಾಳಜಿ ವಹಿಸಿ, ವೃತ್ತಿಪರತೆ ಕಾಪಾಡಿಕೊಳ್ಳಿ ಮತ್ತು ಉತ್ಪ್ರೇಕ್ಷೆ ಅಥವಾ ಸೂಕ್ತವಲ್ಲದ ಊಹಾಪೋಹಗಳನ್ನು ಮಾಡಬೇಡಿ

## ಮಾತುಕತೆ ಮಾನದಂಡಗಳು

ನೀವು ಬರಹದ ಮಾತುಕತೆಯನ್ನು ಕಳುಹಿಸಿಕೊಡುವಾಗ, ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳಿ:

- ನಿಮ್ಮ ಕೇಳುಗರನ್ನು ತಿಳಿದುಕೊಳ್ಳಿ ಹಾಗೂ ಪರಿಶೀಲಿಸಿ. ಮಾತುಕತೆಯ ಕೇಳುಗರನ್ನು ಪರಿಶೀಲಿಸಿ - ಇಮೇಲ್ ವಿಳಾಸಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಮತ್ತು "ಎಲ್ಲರಿಗೂ ಉತ್ತರಿಸಿ" ವೈಶಿಷ್ಟ್ಯವನ್ನು ಬಳಸುವ ಬಗ್ಗೆ ಎಚ್ಚರಿಕೆ ವಹಿಸಿ. ಸಂದೇಶ ಪಡೆದುಕೊಳ್ಳುವ ಪ್ರತಿಯೊಬ್ಬ ಕೇಳುಗರ ಪಾತ್ರವನ್ನು ಅರ್ಥಮಾಡಿಕೊಳ್ಳಿ ಮತ್ತು ಅಗತ್ಯಕ್ಕಿಂತ ಹೆಚ್ಚಿನ ಮಾಹಿತಿಯನ್ನು (ಲಗತ್ತುಗಳನ್ನು ಒಳಗೊಂಡಂತೆ) ಕಳುಹಿಸಿಕೊಡಬೇಡಿ. ಆಂತರಿಕ ಸಂದೇಶಗಳನ್ನು ಮ್ಯಾಗ್ನದೊಳಗೆ ಇರಿಸಿ.

- ನಿಮ್ಮ ಎಲ್ಲಾ ಮಾತುಕತೆಗಳಲ್ಲು ವೃತ್ತಿಪರತೆ ಕಾಪಾಡಿಕೊಳ್ಳಿ. ಸಂದೇಶದ ವಿಷಯ ಮತ್ತು ಅದನ್ನು ಹೇಳುವ ಧಾಟಿ ಸೂಕ್ತವಾಗಿದೆ ಎಂದು ಖಚಿತಪಡಿಸಿಕೊಳ್ಳಿ. ಅಗತ್ಯವಿರುವ ಎಲ್ಲಾ ಸಂದರ್ಭಗಳನ್ನು ಒದಗಿಸಿ ಮತ್ತು ನಿಮ್ಮ ಮಾತುಕತೆ ಪತ್ರಿಕೆಯಲ್ಲಿ ಅಥವಾ ಇಂಟರ್‌ನೆಟ್ ಮೂಲಕ ಹೊರಗಿನವರಿಗೆ ಗೊತ್ತಾದರೆ ಪ್ರತಿಕ್ರಿಯೆ ಏನಾಗಬಹುದು ಎಂಬುದನ್ನು ಯೋಚಿಸಿ.
- ಪ್ರತಿಸ್ಪರ್ಧಿಗಳೊಂದಿಗೆ ಮಾತುಕತೆ ಮಾಡುವಾಗ ಅತೀವ ಜಾಗರೂತೆ ವಹಿಸಿರಿ. ಈ ವಿಷಯದ ಕುರಿತಾದ ಹೆಚ್ಚಿನ ಮಾಹಿತಿಗೆ, ದಯವಿಟ್ಟು ಮ್ಯಾಗ್ನದ ವಿಶ್ವಾಸರಹಿತ ಮತ್ತು ಸ್ಪರ್ಧಾ ನೀತಿಯನ್ನು ನೋಡಿ.
- ಖಾಸಗೀತನ, ಗೌಪ್ಯತೆ ಮತ್ತು ಕಾನೂನು ಸವಲತ್ತುಗಳನ್ನು ಗೌರವಿಸಿ (ಅನ್ವಯವಾಗುವಲ್ಲಿ). ಕಾನೂನಿನ ಅಡಿಯಲ್ಲಿ ಅನುಮತಿಸಲಾದ ಮಾತುಕತೆ ನಿಮ್ಮ ಮತ್ತು ಸಂಸ್ಥೆಯ ಒಳಗೆ ಅಥವಾ ಹೊರಗಿನ ವಕೀಲರ ನಡುವೆ ವ್ಯಾಜ್ಯ ಅಥವಾ ಕಾನೂನು ಸಲಹೆಗೆ ಸಂಬಂಧಿಸಿರಬಹುದು.

## ಉಪಯುಕ್ತ ಸಲಹೆಗಳು

### *ಎಚ್ಚರಿಕೆ ವಹಿಸಬೇಕಾದದ್ದು…*

- ಸ್ಪರ್ಧಾತ್ಮಕವಾಗಿ ಸೂಕ್ಷ್ಮ ಮಾಹಿತಿಯನ್ನು ಒಳಗೊಂಡಿರುವ ಅಥವಾ ಸ್ಪರ್ಧಿಗಳೊಂದಿಗೆ ಸ್ಪರ್ಧೆ ಕಡಿಮೆ ಮಾಡಿ ಹೊಂದಾಣಿಕೆ ಪ್ರಯತ್ನವಾಗಿ ಮಾಡುವ ಯಾವುದೇ ಮಾತುಕತೆ, ಉದಾಹರಣೆಗೆ ಬೆಲೆ, ಬಿಡ್‌ಗಳು, ಮಾರುಕಟ್ಟೆಗಳು ಅಥವಾ ಮ್ಯಾಗ್ನದ ವಿಶ್ವಾಸರಹಿತ ಮತ್ತು ಸ್ಪರ್ಧಾ ನೀತಿಯನ್ನು ಉಲ್ಲಂಘಿಸಬಹುದಾದ ಇತರ ವಿಷಯಗಳ ಕುರಿತಾದ ಮಾತುಕತೆಗಳ ಬಗ್ಗೆ.
- ನಿಮ್ಮ ಅರಿವಿಗೆ ಬಾರದ ಅಥವಾ ಪರಿಣತಿ ಇಲ್ಲದ ವಿಷಯಗಳ ಬಗ್ಗೆ ಅಭಿಪ್ರಾಯ ಒದಗಿಸುವುದು - ಊಹೆ ಅಥವಾ ಕಲ್ಪನೆ ಮಾಡಿಕೊಳ್ಳಬೇಡಿ! ನೀವು ಸಾರಸಗಟಾಗಿ ಗೊತ್ತಿರುವ ಮಾಹಿತಿಯನ್ನು ಸ್ಪಷ್ಟವಾಗಿ ತಿಳಿಸಿ. ನಿಮ್ಮ ಅರಿವಿಗೆ ಬಾರದ ಅಥವಾ ಪರಿಣತಿ ಇಲ್ಲದ ವಿಷಯಗಳ ಬಗ್ಗೆ ಅಭಿಪ್ರಾಯ ಒದಗಿಸಿ ಪರಿಹಾರ ನೀಡಲು ಇತರರ ಸಹಾಯ ಪಡೆಯಿರಿ.
- ಕಾನೂನು ಸಮಸ್ಯೆಗಳು - ನೀವು ಮಾತುಕತೆ ನಡೆಸುತ್ತಿರುವ ವಿಷಯವು ಕಾನೂನು ಸಮಸ್ಯೆಗಳನ್ನು ಹುಟ್ಟುಹಾಕಬಹುದೆ ಎಂದು ನಿಮಗೆ ಅನುಮಾನವಿದ್ದರೆ, ನಿಮ್ಮ ಗುಂಪು, ಪ್ರಾದೇಶಿಕ ಮತ್ತು/ಅಥವಾ ಕಾರ್ಪೊರೇಟ್ ಕಾನೂನು ಸಲಹೆಗಾರರನ್ನು ಸೇರಿಸಿಕೊಳ್ಳಿ ಮತ್ತು ಅವರೊಂದಿಗಿನ ನಿಮ್ಮ ಮಾತುಕತೆಗಳನ್ನು "ನಿರ್ದಿಷ್ಟ ಮತ್ತು ಗೌಪ್ಯ" ಎಂದು ಗುರುತಿಸಿಕೊಳ್ಳಿ.
- ಸಾಮಾಜಿಕ ಮಾಧ್ಯಮದ ಮೂಲಕ ಮಾಡಲಾಗುವ ಮಾತುಕತೆಗಳು - ಉದ್ಯೋಗಿಗಳು ಮತ್ತು ಮ್ಯಾಗ್ನ ಪರವಾಗಿ ಕಾರ್ಯನಿರ್ವಹಿಸುವ ಇತರ ವ್ಯಕ್ತಿಗಳು ಮ್ಯಾಗ್ನ ಅನ್ನು ಅವಹೇಳನ ಮಾಡುವುದರಿಂದ ಅಥವಾ ಯಾವುದೇ ಗೌಪ್ಯ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ದೂರವಿರಬೇಕು - ಈ ರಿವಾಜು ಸಾಮಾಜಿಕ ಮಾಧ್ಯಮಕ್ಕು ವಿಸ್ತರಿಸುತ್ತದೆ. ಬಳಕೆದಾರರ ಸೆಟ್ಟಿಂಗ್‌ಗಳು ಏನೇ ಆಗಿದ್ದರು ಕೂಡ, ಸಾಮಾಜಿಕ ಮಾಧ್ಯಮದ ಮೂಲಕ ಮಾಡಿದ ಮಾತುಕತೆಗಳನ್ನು ಖಾಸಗಿ ಎಂದು ಪರಿಗಣಿಸಬಾರದು. ಹೆಚ್ಚಿನ ವಿವರವಾದ ಮಾಹಿತಿಗೆ, ದಯವಿಟ್ಟು ಮ್ಯಾಗ್ನದ ಜಾಗತಿಕ ಇಮೇಲ್, ಇಂಟರ್ ನೆಟ್ ಮತ್ತು ಸಾಮಾಜಿಕ ಮಾಧ್ಯಮ ನೀತಿಯನ್ನು ನೋಡಿ.

### *ಎಂದಿಗು...*

- ದೊಡ್ಡ ಭರವಸೆ ಕೊಡಬೇಡಿ - ವಾಸ್ತವಿಕವಾಗಿರಿ.
- ಅಸಮಾಧಾನಗೊಂಡಾಗ ಸಂದೇಶಗಳನ್ನು ಕಳುಹಿಸಬೇಡಿ; ಅದರ ಬದಲು, ಸಂದೇಶದ ಡ್ರಾಫ್ಟ್ ಅನ್ನು ಸ್ವಲ್ಪ ಸಮಯದವರೆಗೆ ಉಳಿಸಿಕೊಂಡು, ಕಳುಹಿಸುವ ಮೊದಲು ಅದನ್ನು ಪರಿಶೀಲಿಸಿ. ಎರಡನೇ ಅಭಿಪ್ರಾಯ ಪಡೆಯುವುದನ್ನು ಪರಿಗಣಿಸಿ.
- ಇತರ ಪಾಲುದಾರರ ಬಗ್ಗೆ ನಕಾರಾತ್ಮಕವಾಗಿ ಚರ್ಚಿಸಬೇಡಿ - ವೃತ್ತಿಪರರಾಗಿರಿ.
- ತಾರತಮ್ಯ ಅಥವಾ ಕಿರಿಕಿರಿ ಮಾಡುವ ರೀತಿಯ ಯಾವುದೇ ಸಂದೇಶಗಳನ್ನು ಕಳುಹಿಸಬೇಡಿ ಅಥವಾ ಫಾರ್ವರ್ಡ್ ಮಾಡದಿರಿ. ಅಂತಹ ಸಂದೇಶಗಳು ನಿಮಗೆ ಬಂದಲ್ಲಿ, ನಿಮ್ಮ ಮೇಲ್ವಿಚಾರಕರ ಅಥವಾ ವ್ಯವಸ್ಥಾಪಕರ, ಮಾನವ ಸಂಪನ್ಮೂಲ ಇಲಾಖೆಯ, ಗುಂಪು, ಪ್ರಾದೇಶಿಕ ಅಥವಾ ಕಾರ್ಪೊರೇಟ್ ಕಾನೂನು ಸಲಹೆಗಾರರ, ಆಂತರಿಕ ಲೆಕ್ಕಪರಿಶೋಧನೆ ಇಲಾಖೆಯ ಅಥವಾ ನೈತಿಕತೆ ಮತ್ತು ಕಾನೂನು ಅನುಸರಣೆ ಇಲಾಖೆಯ ಸದಸ್ಯರಿಂದ ಸಹಾಯ ಪಡೆದುಕೊಳ್ಳಿ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಮ್ಯಾಗ್ನ ಕಿರುಕುಳ ಮತ್ತು ತಾರತಮ್ಯ ನೀತಿಗಳನ್ನು ನೋಡಿ.

## ಕಂಪನಿ ಮಾಹಿತಿ

ಮ್ಯಾಗ್ನ ಅಥವಾ ನಿಮ್ಮ ಕೆಲಸಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಮಾತುಕತೆಯನ್ನು ಕಂಪನಿ ಮಾಹಿತಿ ಎಂದು ಪರಿಗಣಿಸಬಹುದು (ಅದು ಪೇಪರ್, ಎಲೆಕ್ಟ್ರಾನಿಕ್, ಆಡಿಯೊ ಅಥವಾ ಇತರ ಸ್ವರೂಪದಲ್ಲಿಯೇ ಇರಲಿ) ಎಂಬುದನ್ನು ನೆನಪಿಡಿ.

ಮ್ಯಾಗ್ನದ ವ್ಯವಹಾರಕ್ಕೆ ಕಂಪನಿ ಮಾಹಿತಿಯು ನಿರ್ಣಾಯಕವಾಗಿದೆ - ಅದನ್ನು ಆಂತರಿಕವಾಗಿ ಮತ್ತು ಹೊರಗಿನವರಿಂದ (ಆಂತರಿಕ ಮತ್ತು ಹೊರಗಿನ ಲೆಕ್ಕಪರಿಶೋಧಕ, ಸರ್ಕಾರಿ ಏಜೆನ್ಸಿ ಅಥವಾ ತನಿಖಾಧಿಕಾರಿಗಳು ಮತ್ತು ಮೊಕದ್ದಮೆಗಳು ಮತ್ತು ಇತರ ಕಾನೂನು ಪ್ರಕ್ರಿಯೆಗಳಲ್ಲಿ ಸಾಕ್ಷ್ಯವನ್ನು ಪರಿಶೀಲಿಸುವ ವಕೀಲರು ಸೇರಿದಂತೆ) ಪರಿಶೀಲನೆಗೆ ಒಳಪಡಿಸಬಹುದು.

ಯಾವುದೇ "ಆಫ್-ದಿ-ರೆಕಾರ್ಡ್" ಮಾತುಕತೆಗಳು ಅಥವಾ ಸಂಭಾಷಣೆಗಳಿಲ್ಲ ಎಂದು ಹಾಗೂ ಅಳಿಸಲಾದ ಮಾತುಕತೆಗಳನ್ನು ಮರುಪಡೆಯಬಹುದು ಎಂದು ಊಹಿಸಿ.

ಎಚ್ಚರಿಕೆಯಿಂದ ಮಾತುಕತೆ ಮಾಡುವ ಮೂಲಕ, ನೀವು ಮ್ಯಾಗ್ನದ ಪ್ರತಿಷ್ಠೆಯನ್ನು ಮಾತ್ರವಲ್ಲದೆ, ನಿಮ್ಮ ಪ್ರತಿಷ್ಠೆಯನ್ನು ಕಾಪಾಡಿಕೊಳ್ಳಲು ನೆರವಾಗುತ್ತೀರಿ.

## ಕಾರ್ಪೊರೇಟ್ ಹೊರತರುವಿಕೆ

ತಮ್ಮ ಕರ್ತವ್ಯಗಳ ನಿರ್ವಹಣೆಗೆ ಅಗತ್ಯವಿರುವಾಗ ಹೊರತುಪಡಿಸಿ, ಮ್ಯಾಗ್ನ ಉದ್ಯೋಗಿಗಳು ಯಾವುದೇ ವ್ಯಕ್ತಿಯೊಂದಿಗೆ (ಸ್ನೇಹಿತ, ಸಂಬಂಧಿಕ ಮತ್ತು ಮಾಹಿತಿಯ ಅಗತ್ಯವಿಲ್ಲದ ಇತರ ಮ್ಯಾಗ್ನ ಉದ್ಯೋಗಿಗಳೊಂದಿಗೆ) "ಹೊರಗೆ ಹೋಗಬಾರದ ಮಾಹಿತಿ" ಇರುವ ಕಂಪನಿ ವಿಷಯಗಳನ್ನು ಚರ್ಚಿಸಬಾರದು. ಜೊತೆಗೆ, ಮ್ಯಾಗ್ನ ಉದ್ಯೋಗಿಗಳು "ಅಧಿಕೃತ ವಕ್ತಾರ" ಆಗದ ಹೊರತು, ಕಂಪನಿ ವಿಷಯಗಳನ್ನು ಮಾಧ್ಯಮ, ಉದ್ಯಮದ ವೃತ್ತಿಪರರು ಅಥವಾ ಮ್ಯಾಗ್ನ ಷೇರುದಾರರೊಂದಿಗೆ ಚರ್ಚಿಸಲು ಅಧಿಕಾರ ಹೊಂದಿರುವುದಿಲ್ಲ. ಹೆಚ್ಚಿನ ವಿವರವಾದ ಮಾಹಿತಿಗೆ, ದಯವಿಟ್ಟು ಮ್ಯಾಗ್ನದ ಕಾರ್ಪೊರೇಟ್ ಹೊರತರುವಿಕೆ ನೀತಿ ಮತ್ತು ಮ್ಯಾಗ್ನದ ಮಾಧ್ಯಮ ನೀತಿಯನ್ನು ನೋಡಿ.

## ಡೇಟಾ ಗೌಪ್ಯತೆ ಮತ್ತು ರಕ್ಷಣೆ

ಮಾತುಕತೆಗಳಲ್ಲಿ ಮ್ಯಾಗ್ನ ಕಾಪಾಡಿಕೊಳ್ಳಬೇಕಾದ ವೈಯಕ್ತಿಕ ಮಾಹಿತಿ ಇರುತ್ತವೆ ಎಂಬುದನ್ನು ನೆನಪಿನಲ್ಲಿಡಿ. ವೈಯಕ್ತಿಕ ಮಾಹಿತಿಯನ್ನು ಉದ್ದೇಶಕ್ಕಾಗಿ ಅಗತ್ಯವಿರುವಷ್ಟು ಮತ್ತು ಅಧಿಕೃತ ಸಿಬ್ಬಂದಿಗೆ ಮಾತ್ರ ಬಹಿರಂಗಪಡಿಸಿ. ಯಾವುದೇ ಡೇಟಾ ಭದ್ರತಾ ಲೋಪಗಳ ಅಪಾಯವನ್ನು ಕಡಿಮೆ ಮಾಡಲು ಮ್ಯಾಗ್ನದ ಭದ್ರತಾ ಪ್ರೋಟೋಕಾಲ್‌ಗಳನ್ನು ಅನುಸರಿಸಿ. ಹೆಚ್ಚಿನ ಮಾರ್ಗದರ್ಶನಕ್ಕಾಗಿ, ದಯವಿಟ್ಟು ಮ್ಯಾಗ್ನದ ಡೇಟಾ ಗೌಪ್ಯತೆ ನೀತಿ ಮತ್ತು ಸಂಬಂಧಪಟ್ಟ ಕಾರ್ಯವಿಧಾನಗಳನ್ನು ನೋಡಿ.

## ಹೆಚ್ಚಿನ ಮಾಹಿತಿಗಾಗಿ:

ಹೆಚ್ಚಿನ ಮಾಹಿತಿ ಅಥವಾ ಸಲಹೆಗೆ, ದಯವಿಟ್ಟು ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ, ಪ್ರಾದೇಶಿಕ ಅನುಸರಣೆ ಅಧಿಕಾರಿ, ಮ್ಯಾಗ್ನದ ನೈತಿಕತೆ ಉಪಾಧ್ಯಕ್ಷರು ಮತ್ತು ಮುಖ್ಯ ಅನುಸರಣೆ ಅಧಿಕಾರಿ ಅಥವಾ ಕಾರ್ಪೊರೇಟ್ ಮಾತುಕತೆ ಮತ್ತು ಮಾಧ್ಯಮ ಸಂಬಂಧಗಳ ಉಪಾಧ್ಯಕ್ಷರನ್ನು ಸಂಪರ್ಕ ಮಾಡಿ.


| | |
|---|---|
| Issued: | May 1, 2014 |
| Revised: | December 13, 2021 |
| Next Review: | Q4 2024 Day, Year (e.g January 15, 2019) |
| Issued By: | Ethics & Legal Compliance |
| Approved By: | Chief Compliance Officer, on behalf of Magna Compliance Council |